ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೇ ಬಹಳ ಗಂಭೀರವಾದ ಪ್ರಶ್ನೆಯನ್ನು ಕೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಇಲ್ಲ, ಇಲ್ಲವೆಂದು ಉತ್ತರ ಬಂದಿರುತ್ತದೆ. ಸರ್ಕಾರದ ಮೇಲ್ಪಟ್ಟ ಅಧಿಕಾರಿಗಳಿಂದ ಈ ಅಧಿಕಾರಿಗಳ ವಿರುದ್ಧ ಏನಾದರೂ ದೂರು ಬಂದಿರುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ದೂರುಗಳು ಬಂದು, ವಿಚಾರಮಾಡಿ, ಯಾವುದೇ ಒಂದು ದುರುಪಯೋಗ ನಡೆದಿಲ್ಲವೆಂದು ಕಂಡುಬಂದದ್ದರಿಂದ ಈ ತೀರ್ಮಾನಕ್ಕೆ ಬಂದಿರುತ್ತೇವೆ.

Vacant posts of C.T.Os. and recovery of dues.

750 SRI G.K. TAKKED (Parasgad)—Will the Chief Minister be pleased to state :—

(a) whether it has come to the notice of the Government that 13 posts of Commercial Tax Officers are vacant in Commercial Tax Department since one year ;

(b) if so, whether it is a fact that the tax due to Government has remained unrecovered ;

(c) if so, when these vacant posts will be filled up ?

SRI R. GUNDU RAO (Chief Minister)—

(a) Only 7 posts are vacant since 8-7-1981.

(b) No.

(c) Shortly.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಏಳು ಸ್ಥಳಗಳು ಮಾತ್ರ ೮-೭-೧೯೮೧ರಿಂದ ಖಾಲಿ ಇವೆ ಎಂದು ಹೇಳಿರುತ್ತಾರೆ. ಈ ಸ್ಥಾನಗಳು ಅದಕ್ಕಿಂತಲೂ ಮೊದಲಿನಿಂದ ಖಾಲಿ ಇದ್ದರೂ ಕೂಡ ಇದನ್ನು ಭರ್ತಿ ಮಾಡಿಲ್ಲ. ಇದು ಒಂದು ಗಂಭೀರವಾದ ವಿಷಯವಾಗಿರುತ್ತದೆ. ಇದನ್ನು ಭರ್ತಿ ಮಾಡಿಲ್ಲವಾದ ಕಾರಣ ರಾಜ್ಯಕ್ಕೆ ಬರುವ ಆದಾಯಕ್ಕೆ ಕೊರತೆಯಾಗುತಾಗಲಿಲ್ಲವೆ ?

ಶ್ರೀ ಎಂ. ವೀರಪ್ಪಮೊಯ್ಲಿ (ಅರ್ಥ ಸಚಿವರು—ಮುಖ್ಯಮಂತ್ರಿಗಳ ಪರವಾಗಿ)— ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ನಾವು ೮-೭-೧೯೮೧ಕ್ಕೆ ಏಳು ಸ್ಥಾನಗಳು ಖಾಲಿ ಇದೆ ಎಂದು ಹೇಳಿದ್ದೇವೆ. ಈಗ ೧೩ ಪೋಸ್ಟ್‌ಗಳಂ ಖಾಲಿಯಾಗಿರುವ ಕಾರಣ ಸುಮಾರು ಇದರಲ್ಲಿ ಡಿಪಾರ್ಟ್‌ಮೆಂಟಲ್ ಪ್ರಮೋಷನ್ ಕಮಿಟಿಯವರು ೧೭-೧೦-೧೯೮೧ರಂದು ೧೭ ಆಫೀಸರ್ ಪೋಸ್ಟ್‌ಗಳ ಪೈಕಿ ಎಲಿಜಿಬಲಿಟಿ ಇರತಕ್ಕಂಥ ೫೫ ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರಾಗಿ ಪ್ರಮೋಷನ್ ಮಾಡಬೇಕೆಂದು ಕೆ.ಪಿ.ಎಸ್.ಸಿ.ಗೆ ಬರೆದಿದ್ದೆವು. ಸುಮಾರು ಎರಡು ತಿಂಗಳ ಕಾಲವಾದರೂ ಅವರು ಏನೂ ಮಾಡದೆ ಇದ್ದ ಕಾರಣದಿಂದಾಗಿ ನಾವು ಆದರೆ ಸರ್ಕಾರದವರು ಸುಮಾರು ೧೦ ಎ.ಸಿ.ಟಿ.ಓ. ೧೫-೨-೧೯೮೧ರಿಂದ ತೆಗೆದುಕೊಂಡಿರುತ್ತೇವೆ. ಮತ್ತು ಮೂರು ಎ.ಸಿ.ಟಿ.ಓ. ಯಿಂದ ಸಿ.ಟಿ.ಓ. ಆಗಿ ೧೭-೩-೧೯೮೧ರಂದು ಭರ್ತಿ ಮಾಡಿದ್ದೇವೆ. ಈಗ ಯಾವ ಸಿ.ಟಿ.ಓ. ಪೋಸ್ಟ್ ಖಾಲಿಯಾಗಿಲ್ಲ. ೧೩ ಪೋಸ್ಟ್‌ಗಳು ಈಗಾಗಲೇ ಭರ್ತಿಯಾಗಿರುತ್ತದೆ.

ಶ್ರೀ ಜಿ.ಕೆ. ತೆಕ್ಕೇಡ್.—ಈ ವರ್ಷ ಸುಮಾರಿಗೆ ೮-೭-೧೯೮೧ರಿಂದ ಈ ಸ್ಥಳಗಳು ಖಾಲಿ ಇರುವುದರಿಂದ ವ್ಯಾಪಾರಸ್ತರಿಂದ ಬರತಕ್ಕಂಥ ಆದಾಯ ಬಾರದೆ ಇರುವುದಲ್ಲದೆ, ಟ್ಯಾಕ್ಸ್ ಕೊಡಬೇಕಾದ್ದು ಮತ್ತು ವಿಲೇವಾರಿಯಾಗಬೇಕಾದ್ದು ಹಾಗೆಯೇ ಬಿದ್ದಿರುತ್ತದೆ. ಇದರಿಂದ ಸುಮಾರು ೨-೩ ಕೋಟಿ ರೂಪಾಯಿಗಳು ಆದಾಯ ಬರತಕ್ಕಂಥದ್ದು ಬೊಕ್ಕಸಕ್ಕೆ ಬಾರದೆ ಹಾನಿಯಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಏನಾದರೂ ಕ್ರಮತೆಗೆದುಕೊಳ್ಳಬಾರದೆ ಎಂದು ಕೇಳುತ್ತೆನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಂತೆ ಆದಾಯ ರಹಿತವಾಗಿ ಬೊಕ್ಕಸಕ್ಕೆ ೨–೩ ಕೋಟಿ ರೂಪಾಯಿಗಳ ಹಾನಿಯಾಗಿಲ್ಲ. ಈಗಾಗಲೇ ಮಾನ್ಯ ಲಕ್ಷ್ಮೀಸಾಗರ್ ರವರಿಗೆ ತಿಳಿಸಿರುತ್ತೇನೆ. We have demonstrated greater strength. Of course, you must compliment the officers of the Tax Department for putting in additional efforts. ಈಗಾಗಲೇ ಹೇಳಿದಂತೆ ಸರ್ಕಾರದ ಮಟ್ಟಿಗೆ ನಾವು ಸುಮ್ಮನೆ ಇರಲಿಲ್ಲ. ಆಗಬೇಕಾದ ಕೆಲಸಗಳಿಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ೧೩ ಪೋಸ್ಟ್ ಗಳನ್ನು ಭರ್ತಿ ಮಾಡಿದ್ದೇವೆ, ಒಂದು ಪೋಸ್ಟ್ ಕೂಡ ಬಾಕಿ ಇಲ್ಲವೆಂದು ಹೇಳುತ್ತೇನೆ.

Repairs to Hongalwadi Channel in Chamarajanagar Taluk

781 SRI M. C. BASAPPA (Chamarajanagar) :—Will the Minister for Transport and Minor Irrigation be pleased to state :—

(a) whether estimate has been prepared for repairing the existing Hongalwadi Channel in Chamarajanagar Taluk ;

(b) if so, the cost of the estimate ;

(c) when the work is likely to be taken up ;

SRI M. M. J. SADYOJATHA (Minister for Transport and Minor Irrigation—

(a) No.

(b) and (c) Does not arise since the scheme is under investigation.

ಶ್ರೀ ಎಂ. ಸಿ. ಬಸಪ್ಪ.—ತಮ್ಮ ಉತ್ತರದಲ್ಲಿ ಅಂದಾಜು ತಯಾರಾಗಿಲ್ಲವೆಂದು ಹೇಳಿದ್ದೀರಿ, ಮತ್ತು ಯೋಜನೆಯ ತನಿಖೆ ಇನ್ನೂ ಆಗಿಲ್ಲವೆಂದು ಹೇಳಿದ್ದೀರಿ. ಆದ್ದರಿಂದ ಈ ನಾಲೆಯ ದುರಸ್ತಿ ಕೆಲಸವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಅದನ್ನು ತಿಳಿಸಲಾಗುವುದಿಲ್ಲವೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ —ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ರಿಪೋರ್ಟ್ ಬಂದಿರುತ್ತದೆ. ಫೈನಲ್ ರಿಪೋರ್ಟ್ ಬರಬೇಕಾಗಿರುತ್ತದೆ. ಫೈನಲ್ ರಿಪೋರ್ಟ್‌ನ್ನು ತರಿಸಿಕೊಂಡು ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ.ಸಿ. ಬಸಪ್ಪ.–ಪ್ರಿಲಿಮಿನರಿ ರಿಪೋರ್ಟ್ ಬಂದಿದೆ ಎಂದರೆ It is not the estimate of the work ? ಪ್ರಿಲಿಮಿನರಿ ರಿಪೋರ್ಟ್ ಎಂದರೆ ಅಂದಾಜು ಖರ್ಚು ಎಷ್ಟು ಎನ್ನುವುದನ್ನು ಸೂಚಿಸುತ್ತದೆಯಲ್ಲವೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಹೌದು.

ಶ್ರೀ ಎಂ.ಸಿ. ಬಸಪ್ಪ.—ಕೆಲಸದ ಜರೂರಾತಿ ಮತ್ತು ಅಗತ್ಯತೆ ಸರ್ಕಾರದ ಗಮನಕ್ಕೆ ಬಂದಿದೆ ಎಂದಮೇಲೆ ಯಾವಾಗ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ?

SRI M.M.J. SADYOJATHA.—It depends upon the availability of funds.

SRI M.C. BASAPPA.—Whether the work is not important ?

SRI M.M.J. SADYOJATHA.—It is important.